**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,ನಾಗಮಂಗಲ.**

**ಅಸಲು ದಾವಾ ಸಂಖ್ಯೆ. 69/2019**

**ಪ್ರ.ಸಾ-1**

**ಸಾಕ್ಷಿಗೆ ದಿನಾಂಕಃ 10-06-2026 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು ಶ್ರೀ.ಎಂ.ಇ.ಹೆಚ್ ವಾದಿಯ ಪರ ವಕೀಲರಿಂದಃ**

1. ವಾದಿಯು ನನ್ನ ವಿರುದ್ಧ ಯಾವ ಪರಿಹಾರ ಕೇಳಿ ದಾವೆ ಸಲ್ಲಿಸಿದ್ದಾರೆ ಎಂದು ತಿಳಿದುಕೊಂಡಿದ್ದೇನೆ. ದಾವಾ ಆಸ್ತಿಯನ್ನು 1988 ರಲ್ಲಿ ಪಂಚಾಯಿತಿಯಿಂದ ವಾದಿಗೆ ಕೊಟ್ಟಿರುವ ಆಸ್ತಿ ಎಂದರೆ ಸರಿ. ಪಂಚಾಯಿತಿಯಿಂದ ಆಸ್ತಿಯನ್ನು ವಾದಿಗೆ ಕೊಟ್ಟಿರುವುದರಿಂದ ವಾದಿಯೇ ಸ್ವಾಧೀನಾನುಬೋಗದಲ್ಲಿ ಇದ್ದಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಾವು ಕೂಡ ಸ್ವಾಧೀನಾನುಬೋಗದಲ್ಲಿ ಇದ್ದೇವೆ ಎಂದು ನುಡಿಯುವರು.

2. ದಾವಾ ಆಸ್ತಿಯಲ್ಲಿ ನಾವು ಕೂಡ ಸ್ವಾಧೀನಾನುಬೋಗದಲ್ಲಿ ಇದ್ದೇವೆ ಎಂದು ಹೇಳಲು ಪಂಚಾಯಿತಿಯವರು ನಮಗೆ ಆಸ್ತಿಯನ್ನು ಮಂಜೂರು ಮಾಡಿಕೊಟ್ಟಿಲ್ಲ, ಆದರೆ ಪಾರಿಕತ್ತಿನ ಮೂಲಕ ಸ್ವಾಧೀನಾನುಭವದಲ್ಲಿ ಇದ್ದೇವೆ ಎಂದು ನುಡಿಯುುವರು. ಈ ಕುರಿತು ವಿಭಾಗ ಅಥವಾ ಪಾರಿಕತ್ತನ್ನು ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ. ನಾನು ಹೇಳುತ್ತಿರುವ ಪಾರಿಕತ್ತಿನಲ್ಲಿ ಬರೆದಿದೆ ಎಂದು ಹೇಳಲಾಗುವ ಆಸ್ತಿಯ ನಂಬರ್ ಅಥವಾ ಎಂ.ಆರ್ ನಂಬರ್ ನನಗೆ ಗೊತ್ತಿಲ್ಲ.

3. 40X45 ಅಡಿ ಆಸ್ತಿಯ ಪೂರ್ವಕ್ಕೆ ನಂಜೇಗೌಡ, ಪಶ್ಚಿಮಕ್ಕೆ ರಸ್ತೆ, ಉತ್ತರಕ್ಕೆ ರಸ್ತೆ ಮತ್ತು ದಕ್ಷಿಣಕ್ಕೆ ಗ್ರಾಮಠಾಣಾ ಎಂದು ಇರುವ ಚಕ್ಕುಬಂದಿಯ ಜಾಗದಲ್ಲಿ ವಾದಿಯೇ ಸ್ವಾಧೀನಾನುಬೋಗದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಾನು ಸ್ವಾಧೀನಾನುಬೋಗದಲ್ಲಿ ಇದ್ದೇನೆ ಎಂದು

ನುಡಿಯುವರು. ನನ್ನ ಪ್ರತಿವಾದ ಪತ್ರದಲ್ಲಿ ನಾವು 30X40 ಅಡಿ ಜಾಗದಲ್ಲಿ ಸ್ವಾಧೀನಾನುಬೋಗದಲ್ಲಿ ಇದ್ದೇನೆ ಎಂದು ಬರೆಸಿದ್ದೇನೆ. ನಾನು ನನ್ನಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಹೇಳಿರುವ ಚಕ್ಕುಬಂದಿಯೇ ಬೇರೆ ಮತ್ತು ವಾದಪತ್ರದಲ್ಲಿಹೇಳಿರುವ ಚಕ್ಕುಬಂದಿಯೇ ಬೇರೆ ಎಂದರೆ ಸರಿ.

4. ನಾನು ಪ್ರತಿವಾದ ಪತ್ರದಲ್ಲಿ ಹೇಳಿರುವ ಆಸ್ತಿಗೆ ಸಂಬಂಧಿಸಿದಂತೆ ದಾಖಲಾತಿಗಳನ್ನು ಹಾಜರುಪಡಿಸಿದ್ದೇನೆ. ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಹೇಳಿರುವ ಆಸ್ತಿಯ ಅಳತೆ ಮತ್ತು ಚಕ್ಕುಬಂದಿಯನ್ನು ತೋರಿಸಲು ದಾಖಲಾತಿಗಳನ್ನು ಹಾಜರುಪಡಿಸಿದ್ದೇನೆ.

5. ದಿನಾಂಕ 07.10.1988 ರಲ್ಲಿ ವಾದಪತ್ರದಲ್ಲಿರುವ ಆಸ್ತಿಯ ಚಕ್ಕುಬಂದಿ ಮತ್ತು ಅಳತೆಯಂತೆ ವಾದಿಗೆ ಆಸ್ತಿಯನ್ನು ಮಂಜೂರು ಮಾಡಿದ್ದಾರೆ ಎಂದರೆ ಸರಿಯಲ್ಲ. ನಿಪಿ 5 ರಲ್ಲಿರುವ ಪೆಟ್ಟಿಗೆ ಅಂಗಡಿ ವಾದಿಗೆ ಸೇರಿದ್ದು ಎಂದರೆ ಸರಿಯಲ್ಲ. ಸದರಿ ಪೆಟ್ಟಿಗೆ ಅಂಗಡಿಯ ಪಕ್ಕದಲ್ಲಿ ತೆಂಗಿನಕಾಯಿಯನ್ನು ಹಾಕಿರುವ ಜಾಗವೂ ಕೂಡ ವಾದಿಗೆ ಸೇರಿದ್ದು ಎಂದರೆ ಸರಿಯಲ್ಲ. ನಿಪಿ 5 ರಲ್ಲಿ ಕಾಣುವ ಪೆಟ್ಟಿಗೆ ಅಂಗಡಿಯಲ್ಲಿ ವಾದಿಯು ವ್ಯಾಪಾರ ಮಾಡುತ್ತಿದ್ದಾರೆ ಎಂದರೆ ಸಾಕ್ಷಿಯು ಅದು ನನಗೆ ಸೇರಿದ್ದು ಎಂದು ನುಡಿಯುವರು. ನಾನು ಸದರಿ ಪೆಟ್ಟಿಗೆ ಅಂಗಡಿಯನ್ನು ಇಟ್ಟು ಕೊಂಡು ವ್ಯಾಪಾರ ಮಾಡುತ್ತಿದ್ದೇನೆ ಎಂದು ಪ್ರತಿವಾದ ಪತ್ರದಲ್ಲಿ ಹಾಗೂ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಹೇಳಿಲ್ಲ ಮತ್ತು ಹೇಳಲು ತೊಂದರೆ ಇರಲಿಲ್ಲ.

**ಅಸಲು ದಾವಾ ಸಂಖ್ಯೆ. 69/2019**

**ಪ್ರ.ಸಾ-1**

6. ಮಂಜೂರಾದಾಗಿನಿಂದಲೂ ವಾದಿಯೇ ದಾವಾ ಸ್ವತ್ತಿನ ಸ್ವಾಧೀನಾನುಬೋಗದಲ್ಲಿ ಇದ್ದಾರೆ ಮತ್ತು ನಾನು ಅವರಿಗೆ ವಿನಾಕಾರಣ ತೊಂದರೆ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗೆ ನಾನು ವಿನಾಕಾರಣ ತೊಂದರೆ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ನನಗೆ ಸಂಬಂಧಿಸಿದ್ದು ಎಂದು ತೋರಿಸಲು ಯಾವುದೇ ದಾಖಲಾತಿಗಳನ್ನು ಹಾಜರು ಪಡಿಸಿಲ್ಲವಾದರೂ ಕೂಡ ವಾದಿಗೆ ತೊಂದರೆ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸರಿ ಇದೆ.** **ನನ್ನ ಸಮಕ್ಷಮ**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ.,ನ್ಯಾಯಾಲಯ, ನಾಗಮಂಗಲ.**